

بِسْمِ اللّٰہِ الرَّحْمٰنِ الرَّحِیم

# ಜಲ್ಸಾ ಸಾಲಾನ ಜರ್ಮನಿ – 2018

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನಿಯ **‘ಕಾಲ್ಸ್‌ರೂಹೇ’** ನಿಂದ **07–09–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್‌ಹಮ್ದುಲಿಲ್ಲಾಹ್, ಇಂದಿನಿಂದ ಜರ್ಮನಿಯ ಜಲ್ಸ ಸಾಲಾನ ಪ್ರಾರಂಭವಾಗುತ್ತಿದೆ. ಇನ್ನೊಂದು ಜಲ್ಸ ಸಾಲಾನದಲ್ಲಿ ಭಾಗವಹಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಿದ್ದಾನೆ. ಜಲ್ಸ ಸಾಲಾನ ಎಂದರೇನು? ಜಲ್ಸ ಸಾಲಾನದ ಉದ್ದೇಶ ಲಕ್ಷ್ಯವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವರಿಸುತ್ತಾ ಹೇಳಿದರು: ಇದು ಯಾವುದೇ ಲೌಕಿಕ ಜಾತ್ರೆಯಲ್ಲ, ಇಲ್ಲಿ ನಾವು ಜಮಾಯಿಸುವುದು ಯಾವುದೇ ಲೌಕಿಕ ಉದ್ದೇಶಲಕ್ಷ್ಯವನ್ನು ಹೊಂದಿ ಅಥವಾ ನಮ್ಮ ಜನ ಸಂಖ್ಯೆಯನ್ನು ಪ್ರದರ್ಶಿಸಲಿಕ್ಕೋಸ್ಕರವಾಗಲಿ ಅಥವಾ ಲೌಕಿಕ ಪ್ರಭಾವ ಬೀರಲಿಕ್ಕೋಸ್ಕರವಾಗಲಿ ಅಲ್ಲ. ತದ್ವಿರುದ್ಧವಾಗಿ ಇಲ್ಲಿ ಜಮಾಯಿಸುವವರು ಅಲ್ಲಾಹನಿಗೋಸ್ಕರ ಮಾತ್ರ ಜಮಾಯಿಸಬೇಕಾಗಿದೆ. ಇಲ್ಲಿಗೆ ಆಗಮಿಸುವವರು ತಮ್ಮ ಜ್ಞಾನ ತೃಷೆಯನ್ನೂ ಆಧ್ಯಾತ್ಮಿಕ ತೃಷೆಯನ್ನೂ ನೀಗಿಸುವವರಾಗಬೇಕು. ಅವರು ತಮ್ಮ ಜ್ಞಾನದಲ್ಲಿಯೂ ಆಧ್ಯಾತ್ಮಿಕತೆಯಲ್ಲೂ ಅಭಿವೃದ್ಧಿಯನ್ನು ಪಡೆಯುವವರಾಗಬೇಕು ಮತ್ತು ಅದರೊಂದಿಗೆ ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸಿಕೊಡಲು ಪ್ರಯತ್ನ ಮಾಡುವವರಾಗಬೇಕು. ಆದರೆ ಬಹಳ ದುಃಖದಿಂದ ಹೇಳುವುದೇನೆಂದರೆ, ಈ ಜಲ್ಸಕ್ಕೆ ಆಗಮಿಸುವ ಕೆಲವು ಜನರು ಜಲ್ಸದಲ್ಲಿ ಭಾಗವಹಿಸಿದರೂ ಏನನ್ನೂ ಗಳಿಸುವುದಿಲ್ಲ. ಅವರು ಆಗಮಿಸಿ ಕೆಲವು ಸ್ನೇಹಿತರನ್ನು ಭೇಟಿಯಾಗುತ್ತಾರೆ ಮತ್ತು ತಮ್ಮ ವೃತ್ತಿಗಳ ಬಗ್ಗೆ ಪರಸ್ಪರ ಮಾತನಾಡುತ್ತಾರೆ. ಇಂತಹ ಜನರು ಕೆಲವು ಸಮಸ್ಯೆಗಳನ್ನೂ ಸೃಷ್ಟಿಸುತ್ತಾರೆ. ಕೆಲವು ಯುವ ಜನರು ಮತ್ತು ಮಕ್ಕಳು ತಪ್ಪು ಗ್ರಹಿಕೆಗಳನ್ನು ಹೊಂದಲು ಇಂತಹ ಜನರು ಕಾರಣರಾಗುತ್ತಾರೆ. ಕೆಲವರು ಬಹಳ ಜುಗುಪ್ಸಾವಾಹಕ ಕೃತ್ಯಗಳನ್ನೂ ಮಾಡುತ್ತಾರೆ ಮತ್ತು ತಮ್ಮನ್ನು ಯಾರೂ ನೋಡುತ್ತಾ ಇಲ್ಲ ಎಂದು ಭಾವಿಸುತ್ತಾರೆ. ಆದರೆ ನಾವು ನೆನಪಿಡಬೇಕಾದುದೇನೆಂದರೆ, ಅಲ್ಲಾಹನು ನಮ್ಮನ್ನು ಪ್ರತಿಕ್ಷಣದಲ್ಲಿ ಯಾವಾಗಲೂ ನೋಡುತ್ತಾ ಇರುತ್ತಾನೆ ಎಂದು. ನಾನು ಈ ದಿನ ಎಲ್ಲದಕ್ಕಿಂತ ಮೊದಲು ಹೇಳಲು ಬಯಸುವುದೇನೆಂದರೆ ನಿಮ್ಮ ಪೈಕಿ ಪ್ರತಿಯೊಬ್ಬನು ಚೆನ್ನಾಗಿ ನೆನಪಿಟ್ಟುಕೊಳ್ಳಬೇಕಾದುದು ಏನೆಂದರೆ ಈ ಜಲ್ಸ ಸಂಪೂರ್ಣವಾಗಿ ಆಧ್ಯಾತ್ಮಿಕವಾದ ಜಲ್ಸವಾಗಿದೆ. ಈ ಜಲ್ಸವನ್ನು ಜರಗಿಸುವುದು ನಾವು ತಖ್ವದಲ್ಲಿ ಅಭಿವೃದ್ಧಿಗಳಿಸುವವರಾಗಬೇಕು, ನಾವು ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸಿ ಅದರಲ್ಲಿಯೂ ಅಭಿವೃದ್ಧಿ ಗಳಿಸುವವರಾಗಬೇಕು ಎಂಬ ಉದ್ದೇಶದಿಂದ ಮಾತ್ರವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸದ ಉದ್ದೇಶಲಕ್ಷ್ಯ ತಖ್ವ ಗಳಿಸುವುದಾಗಿದೆ ಎಂದು ಹೇಳಿದ್ದಾರೆ. ಅವರು ತಖ್ವದ ಬಗ್ಗೆ ಜಮಾಅತಿಗೆ ಉಪದೇಶಿಸುತ್ತಾ ತಖ್ವ ಪ್ರತಿಯೊಂದರ ಬೇರು ಆಗಿದೆ ಎಂದು ಹೇಳಿದ್ದಾರೆ. ತಖ್ವದ ಅರ್ಥವೇನೆಂದರೆ ದೇಹದ ಪ್ರತಿಯೊಂದು ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ನರನಾಡಿ ಪಾಪದಿಂದ ತನ್ನನ್ನು ರಕ್ಷಿಸಿಕೊಳ್ಳಬೇಕು. ಯಾವುದರ ಬಗ್ಗೆ ಕೆಡುಕಿನ ಸಂಶಯವಿದೆಯೋ ಅಂತಹ ವಸ್ತುವಿನಿಂದ ಸಹ ತನ್ನನ್ನು ರಕ್ಷಿಸುವುದು ತಖ್ವ ಆಗಿರುತ್ತದೆ.

ಈಗ ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸಬೇಕು. ನಮ್ಮ ಪೈಕಿ ಪ್ರತಿಯೊಬ್ಬನು ಸೂಕ್ಷ್ಮಾತಿಸೂಕ್ಷ್ಮ ಪಾಪ ಕೃತ್ಯದಿಂದ ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನ ಮಾಡುತ್ತಾ ಇದ್ದೇನೆಯೋ ಎಂದು. ಪ್ರತಿಯೊಬ್ಬನು ಸ್ವತಃ ತನ್ನನ್ನು ಪರಿಶೋಧಿಸಬೇಕು. ಯಾವುದರ ಬಗ್ಗೆ ಕೆಡುಕಿನ ಸಂಶಯವಿದೆಯೋ ಅದರಿಂದ ರಕ್ಷಿಸಿಕೊಳ್ಳಲು ನಾವು ಪ್ರಯತ್ನಿಸುತ್ತಿದ್ದೇವೋ ಎಂದು ನೋಡಬೇಕು. ಹೀಗೆ ಮಾಡುವುದಿಲ್ಲವಾದರೆ ಭಾಷಣಗಳನ್ನು ಆಲಿಸುವುದರಿಂದ ಮತ್ತು ತಾತ್ಕಾಲಿಕ ಉತ್ಸಾಹಭರಿತರಾಗಿ ಘೋಷಣೆ ಕೂಗುವುದರಿಂದ ಪ್ರಯೋಜನವೇನೂ ಲಭಿಸದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ತಖ್ವದ ಪ್ರಭಾವ ಮುತ್ತಖಿಯ ಮೇಲೆ ಇಹಲೋಕದಲ್ಲಿಯೇ ಪ್ರಾರಂಭವಾಗುತ್ತದೆ. ವಿಷದ ಪ್ರಭಾವ ಮತ್ತು ತಿರ್‌ಯಾಖ್ (ವಿಷಸಂಹಾರಿಯ) ಪ್ರಭಾವ ಶರೀರದ ಮೇಲೆ ತಕ್ಷಣ ಉಂಟಾಗುವ ಹಾಗೆ ತಖ್ವದ ಪ್ರಭಾವ ಸಂಭವಿಸುತ್ತದೆ. ತಖ್ವದ ಮಾರ್ಗದಲ್ಲಿ ಚಲಿಸುವ ವ್ಯಕ್ತಿಯಿಂದ ಅದರ ಪ್ರಭಾವ ಬಾಹ್ಯವಾಗಿ ಪ್ರಕಟಗೊಳ್ಳದಿರುವುದು ಅಸಂಭಾವ್ಯವೇ ಆಗಿದೆ. ತಖ್ವ ಹೊಂದಿದವನು ಕೆಡುಕಿನ ಸಮೀಪ ಸಹ ಹೋಗಲಾರನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಈ ಎಲ್ಲ ವಿಷಯಗಳನ್ನು ಪದೇ ಪದೇ ಪುನರಾವರ್ತಿಸುತ್ತಾ ಹೇಳುತ್ತಿರುವುದು ಏಕೆಂದರೆ, ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಲು ನಿರ್ಧರಿಸಿರುವ ಉದ್ದೇಶವೇನೆಂದರೆ ಲೋಕದಿಂದ ಕಣ್ಮರೆಯಾಗಿರುವ ವಾಸ್ತವಿಕ ಜ್ಞಾನವನ್ನು ಲೋಕದಲ್ಲಿ ಪುನಃ ಸ್ಥಾಪಿಸುವುದಾಗಿದೆ.

ಅಲ್ಲಾಹನ ಇಚ್ಛೆಗೆ ಅನುಸಾರವಾಗಿ ತಖ್ವ ಮತ್ತು ತ್ವಹಾರತ್ (ಪರಿಶುದ್ಧತೆ) ತನ್ನಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುವವನೇ ಜಯಶಾಲಿಯಾಗುವನು. ಅಂತಹ ವ್ಯಕ್ತಿಯೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದೃಷ್ಟಿಯಲ್ಲಿ ವಾಸ್ತವಿಕ ಅಹ್ಮದಿಯಾಗಿರುವನು. ಅಂತಹ ವ್ಯಕ್ತಿಯೇ ಜಲ್ಸದ ಉದ್ದೇಶ ಲಕ್ಷ್ಯವನ್ನು ಈಡೇರಿಸುವವನಾಗುವನು.

ಜಲ್ಸದಲ್ಲಿ ಭಾಗವಹಿಸುವ ಅತಿಥಿಗಳೂ ಆತಿಥೇಯರೂ ಈ ಒರೆಗಲ್ಲು ಪ್ರಕಾರ ತಮ್ಮನ್ನು ಪರಿಶೋಧಿಸಬೇಕು. ಈ ಎರಡು ವಿಭಾಗಗಳ ಜನರಲ್ಲಿ ತಖ್ವ ಇದ್ದರೆ ಅವರಲ್ಲಿ ಈ

ವೈಶಿಷ್ಟ್ಯತೆಗಳು ಹುಟ್ಟುವುವು. ಈ ವಿಷಯಕ್ಕೆ ಸಂಬಂಧಿಸಿ ಈ ಎರಡು ವಿಭಾಗಗಳ ಜನರಿಗೆ ಅವರ ಕೆಲವು ಹೊಣೆಗಾರಿಕೆಗಳನ್ನೂ ಕಡ್ಡಾಯ ಕರ್ತವ್ಯಗಳನ್ನೂ ಈಗ ನಾನು ವಿವರಿಸಿಕೊಡಲು ಇಚ್ಛಿಸುತ್ತೇನೆ. ಈ ಎರಡು ವಿಭಾಗಗಳ ಜನರಲ್ಲಿ ಈ ವೈಶಿಷ್ಟ್ಯತೆಗಳು ಹುಟ್ಟಿದರೆ ಜಲ್ಸದ ಪರಿಸರ ಸಂತೋಷದಾಯಕವಾಗುವುದು ಮತ್ತು ಜಲ್ಸಕ್ಕೆ ಆಗಮಿಸುವುದರ ಉದ್ದೇಶಲಕ್ಷ್ಯ ಸಹ ಈಡೇರುವುದು.

ನಾನು ಮೊತ್ತಮೊದಲು ಕಾರ್ಯಕರ್ತರ ಅಥವಾ ಆತಿಥೇಯರ ಗಮನ ಹರಿಸಲು ಇಚ್ಛಿಸುತ್ತೇನೆ. ಅವರು ತಮ್ಮಲ್ಲಿ ಈ ವೈಶಿಷ್ಟ್ಯತೆಗಳನ್ನು ಸೃಷ್ಟಿಸಲು ಪ್ರಯತ್ನಿಸಬೇಕು. ಅವರು ತಮ್ಮ ಭಾವೋದ್ವೇಗಗಳನ್ನು ಹತೋಟಿಯಲ್ಲಿರಿಸಬೇಕು. ಅವರು ಸದಾ ಅತಿಥಿಗಳ ಬಗ್ಗೆ ಶ್ರದ್ಧೆವಹಿಸಬೇಕು. ಅವರು ಮೃದುವಾದ ಮಾತುಗಳನ್ನಾಡಬೇಕು. ಹುದ್ದೇದಾರರ ಮತ್ತು ಕಾರ್ಯಕರ್ತರ ಪ್ರಥಮ ಕಡ್ಡಾಯ ಕರ್ತವ್ಯವೇನೆಂದರೆ, ಅವರು ಮೃದುವಾಗಿ ಮಾತನಾಡಬೇಕು. ಅವರು ವಿನಯಾನ್ವಿತರಾಗಬೇಕು ಮತ್ತು ಪ್ರತಿಯೊಂದು ಸನ್ನಿವೇಶದಲ್ಲಿಯೂ ಅತಿಥಿಗಳ ಬಗ್ಗೆ ಲಕ್ಷ್ಯ ನೀಡಬೇಕು.

ಕಾರ್ಯಕರ್ತರ ಪರಸ್ಪರ ಸಂಬಂಧದಲ್ಲಿಯೂ ಪ್ರೀತಿ, ನಿಷ್ಠೆ ಮತ್ತು ಭ್ರಾತೃಭಾವನೆ ಇರಬೇಕು. ಅತಿಥಿಗಳೊಂದಿಗೆ ವರ್ತಿಸುವಾಗ ಮತ್ತು ಪರಸ್ಪರ ವರ್ತಿಸುವಾಗ ಸಹ ಕಾರ್ಯಕರ್ತರಲ್ಲಿ ಈ ಭಾವನೆಗಳಿರಬೇಕು. ಕೆಲಸ ಮಾಡುವಾಗ ಕಾರ್ಯಕರ್ತರು ಪರಸ್ಪರ ಕೋಪಗೊಂಡರೆ ಅತಿಥಿಗಳ ಮೇಲೆ ಅದು ಕೆಟ್ಟ ಪ್ರಭಾವ ಬೀರುವುದು. ಕಾರ್ಯಕರ್ತರು ಯಾವಾಗಲೂ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದುದೇನೆಂದರೆ ಅವರು ಕೆಲವು ದಿನಗಳ ಸೇವೆಗೋಸ್ಕರ ತಮ್ಮನ್ನು ಅರ್ಪಿಸಿದ್ದಾರೆ. ಅವರು ಮಾಡುವ ಸೇವಾಕಾರ್ಯ ಬಹಳ ಉನ್ನತ ಮಟ್ಟದ್ದಾಗಿದೆ. ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳ ಸೇವೆ ಮಾಡುವ ಭಾಗ್ಯವಾಗಿದೆ. ಆದುದರಿಂದ ಈ ಕೆಲಸ ಮಾಡುವಾಗ ಅವರು ತಮ್ಮ ವರ್ತನೆಯಿಂದ ಯಾವುದೇ ಅತಿಥಿಗಾಗಲೀ ಕಾರ್ಯಕರ್ತನಿಗಾಗಲೀ ನೋವುಂಟಾಗದಂತೆ ನೋಡಿಕೊಳ್ಳಬೇಕು.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿರುವನು: **ಖೂಲೂ ಲಿನ್ನಾಸಿ ಹುಸ್ನಾ** ಎಂದರೆ ಜನರೊಂದಿಗೆ ಮೃದುವಾಗಿ ಮಾತನಾಡಿರಿ. ಮನುಷ್ಯನ ಸ್ವಭಾವಗುಣವನ್ನು ಉನ್ನತ ಮಟ್ಟಕ್ಕೇರಿಸಲು ಈ ಉಪದೇಶವನ್ನು ಅಲ್ಲಾಹನು ನೀಡಿದ್ದಾನೆ. ಇದೊಂದು ಸಾರ್ವತ್ರಿಕ ಉಪದೇಶವಾಗಿದೆ. ಸತ್ಯವಿಶ್ವಾಸಿ ಪ್ರತಿ ಸಮಯದಲ್ಲಿ ಉನ್ನತ ಸ್ವಭಾವ ಗುಣವನ್ನೇ ಪ್ರಕಟಿಸಬೇಕೆಂದು ಮಾರ್ಗದರ್ಶನ ನೀಡಲಾಗಿದೆ. ಆದರೆ ಜಲ್ಸದ ಈ ವಿಶಿಷ್ಟ ಸಂದರ್ಭದಲ್ಲಿ ಕಾರ್ಯಕರ್ತರು ಜಲ್ಸದ ಅತಿಥಿಗಳ ಸೇವೆಗೋಸ್ಕರ ತಮ್ಮನ್ನು ಅರ್ಪಿಸಿರುವಾಗ ಯಾರಾದರೂ ತಪ್ಪಾದ ರೀತಿಯಲ್ಲಿ ಅಥವಾ ಕಟುವಾಗಿ ಅವರೊಂದಿಗೆ ಮಾತನಾಡುವುದಾದರೆ ಅದಕ್ಕೆ ಉತ್ತರವಾಗಿ ಕಾರ್ಯಕರ್ತರು ಮೃದುವಾಗಿ ಮತ್ತು ಸದ್ಗುಣಭರಿತರಾಗಿ ಉತ್ತರ ನೀಡುವಾಗ ಅವರ ಕಾರ್ಯರೂಪದ ಉದಾಹರಣೆ ಇತರರಿಗೆ ತಮ್ಮ ತಪ್ಪಿನ ಬಗ್ಗೆ ಪ್ರಜ್ಞೆ ಹುಟ್ಟಿಸುವಂತಹದಾಗುವುದು ಮತ್ತು ಅವರಿಗೆ ತಮ್ಮನ್ನು ಸುಧಾರಿಸಲು ಉತ್ತಮ ತರಬೇತಿ ನೀಡುವುದಾಗುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ತ್ರಾಸಿನಲ್ಲಿ ಉತ್ತಮ ಗುಣಕ್ಕಿಂತ ಹೆಚ್ಚು ಭಾರವಾದುದು ಬೇರೊಂದಿಲ್ಲ.

ಆದುದರಿಂದ ಪ್ರತಿಯೊಬ್ಬ ಕಾರ್ಯಕರ್ತ ಕಡ್ಡಾಯವಾಗಿ ನೆನಪಿಡಬೇಕಾದುದೇನೆಂದರೆ, ಅವನು ಅತ್ಯುತ್ತಮ ಸ್ವಭಾವ ಗುಣಗಳನ್ನು ಪ್ರಕಟಿಸಬೇಕು. ನೋಡಿರಿ, ಇದೆಷ್ಟು ಅಗ್ಗವಾದ ವ್ಯಾಪಾರವಾಗಿದೆ. ಯಾರಾದರೂ 'ಡ್ಯೂಟಿಯ ಭಾರದ ಕಾರಣದಿಂದ ಅಥವಾ ಇಂತಿಂತಹ ವ್ಯಕ್ತಿಯ ತಪ್ಪು ವರ್ತನೆಯ ಕಾರಣದಿಂದ ನನಗೆ ಸಹ ಸಿಟ್ಟು ಬಂತು' ಎಂದು ಹೇಳುವುದಾದರೆ ಅಂತಹ ವ್ಯಕ್ತಿ ತನ್ನ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಡೆಗೆ ನೋಡಬೇಕಾಗಿದೆ. ಅವರ ಬಗ್ಗೆ ಅಲ್ಲಾಹನು ಹೇಳಿದ್ದಾನೆ: ಅವರು ನಿಮಗೆ ಅತ್ಯುತ್ತಮ ಮಾದರಿ ಆಗಿದ್ದಾರೆಂದು. ಅವರು ಅನುಭವಿಸದ ಕಷ್ಟವೇನಾದರೂ ಇದೆಯೇ? ಅವರು ಅನುಭವಿಸದ ಗಾಬರಿ ಏನಾದರೂ ಇದೆಯೇ? ಹೀಗಿದ್ದರೂ ಸಹಾಬರು ಹೇಳುತ್ತಾರೆ: ಅವರಿಗಿಂತ ಹೆಚ್ಚು ಮಂದಸ್ಮಿತರಾದವರನ್ನು ನಾವು ಬೇರೆ ಯಾರನ್ನೂ ಕಂಡಿಲ್ಲ ಎಂದು. ನಮಗೆ ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೋರಿಸಿದ ಮಾದರಿ ನಡೆವಳಿಕೆ ಇದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅತಿಥಿಗಳೊಂದಿಗೆ ಸದ್ಗುಣಭರಿತ ನಡೆವಳಿಕೆ ಪ್ರಕಟಿಸುವ ಬಗ್ಗೆ ನೀಡಿದ ಉಪದೇಶ ಸಹ ಪ್ರತಿಯೊಬ್ಬ ಕಾರ್ಯಕರ್ತ ತನ್ನ ಮುಂದೆ ಇರಿಸಬೇಕಾದುದೇ ಆಗಿದೆ. ಅವರು ಹೇಳಿದರು: ಅತಿಥಿಯ ಹೃದಯ ಗಾಜಿನ ಹಾಗಿದೆ. ಅದಕ್ಕೆ ಸ್ವಲ್ಪ ಮಾತ್ರ ಹೊಡೆತ ತಗಲಿದರೂ ಮುರಿದು ಹೋಗುತ್ತದೆ.

ಅತಿಥಿಗಳಿಗೆ ಸೇವೆ ಮಾಡುವವರಿಗೆ ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೋಡಿರಿ, ಅನೇಕ ಅತಿಥಿಗಳು ಆಗಮಿಸಿದ್ದಾರೆ. ಕೆಲವರ ಪರಿಚಯ ನಿಮಗಿದೆ. ಬೇರೆ ಕೆಲವರ ಪರಿಚಯ ನಿಮಗಿಲ್ಲ. ಆದುದರಿಂದ ಪ್ರತಿಯೊಬ್ಬ ಅತಿಥಿಯನ್ನು ಗೌರವಾರ್ಹನೆಂದು ಗಣಿಸಿ ಅವರಿಗೆ ಅನುಕೂಲತೆಗಳನ್ನು ಒದಗಿಸಿರಿ.

ಆದುದರಿಂದ ಅತಿಥಿ ಸತ್ಕಾರದಲ್ಲಿ ಯಾವುದೇ ರೀತಿಯ ತಾರತಮ್ಯತೆ ಇರಬಾರದು. ನಿಮಗೆ ಪರಿಚಯವಿರುವವರೊಂದಿಗೆ ಉತ್ತಮ ವರ್ತನೆ ಮತ್ತು ಪರಿಚಯವಿಲ್ಲದವರೊಂದಿಗೆ ನಿರ್ಲಕ್ಷ್ಯತೆ ಇರಬಾರದು. ಆದುದರಿಂದ ಕಾರ್ಯಕರ್ತರು ತಮ್ಮ ಹೊಣೆಗಾರಿಕೆಗಳನ್ನು ಅರಿತುಕೊಳ್ಳಬೇಕು. ವಿಶಿಷ್ಟವಾಗಿ ಜಲ್ಸಕ್ಕೆ ಆಗಮಿಸುವ ಅಹ್ಮದಿಯೇತರ ಅತಿಥಿಗಳಿಗೆ ಪ್ರತಿಯೊಬ್ಬ ಕಾರ್ಯಕರ್ತ ಮತ್ತು ಪ್ರತಿಯೊಬ್ಬ ಅಹ್ಮದಿ ಇಸ್ಲಾಮಿನ ಸುಂದರ ಉಪದೇಶಗಳ ಕೃತ್ಯ ರೂಪದ ಉದಾಹರಣೆ ತೋರಿಸುವವನಾಗಬೇಕು. ಮತ್ತು ಆ ಮೂಲಕ ತಬ್ಲೀಗ್ ಮಾಡುವವನಾಗಬೇಕು.

ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಕಾರ್ಯಕರ್ತರೂ ಅದೇ ರೀತಿ ಜಲ್ಸದಲ್ಲಿ ಭಾಗವಹಿಸುವವರೂ ಮೌನವಾಗಿ ತಬ್ಲೀಗ್ ಮಾಡುವವರೇ ಆಗಿದ್ದಾರೆ. ಪ್ರತಿಯೊಂದು ವಿಭಾಗದ ಕಾರ್ಯಕರ್ತ ತನ್ನ ವಿಭಾಗವು ಪ್ರಮುಖ ವಿಭಾಗವಾಗಿದೆ

ಎಂದು ಭಾವಿಸಿ ಕಾರ್ಯನಿರತನಾಗಬೇಕು. ಟ್ರಾಫಿಕ್ ಕಂಟ್ರೋಲ್ ವಿಭಾಗ, ಪಾರ್ಕಿಂಗ್ ವಿಭಾಗ, ರಿಜಿಸ್ಟ್ರೇಶನ್, ಸ್ಕಾನಿಂಗ್ ವಿಭಾಗಗಳು, ಆಹಾರ ಸಿದ್ಧಪಡಿಸುವ ವಿಭಾಗ, ಆಹಾರ ಸರಬರಾಜು ವಿಭಾಗ, ಸ್ವಚ್ಛತೆ ಕಾಪಾಡುವ ವಿಭಾಗ, ಶಿಸ್ತು ಕಾಪಾಡುವ ವಿಭಾಗ, ಪ್ರತಿಯೊಂದು ವಿಭಾಗ ಸೇವಾ ನಿರತವಾಗಿದೆ ಮಾತ್ರವಲ್ಲ ನಾನು ಹಿಂದೆ ಹೇಳಿದ ಹಾಗೆ ಮೌನವಾಗಿ ತಬ್ಲೀಗ್ ಸಹ ಮಾಡುತ್ತಿದೆ. ಆದುದರಿಂದ ಕಾರ್ಯಕರ್ತರು ತಮ್ಮ ಕೆಲಸಗಳ ಈ ಮಹತ್ವವನ್ನು ಮನವರಿಕೆ ಮಾಡಿಕೊಳ್ಳಬೇಕು. ಶಿಸ್ತು ವಿಭಾಗದವರು, ಅವರು ಗಂಭೀರ ವದನರಾಗಿ ವರ್ತಿಸಿದರೆ ಮಾತ್ರ ಪ್ರಭಾವ ಬೀರುವೆವು ಎಂದು ಭಾವಿಸಬೇಕಾಗಿಲ್ಲ. ಮಹಿಳೆಯರಲ್ಲಿ ವಿಶಿಷ್ಟವಾಗಿ ಯು.ಕೆ. ಜಲ್ಸದಲ್ಲಿ ಹೆಣ್ಣು ಮಕ್ಕಳು ಮುಗುಳು ನಗುತ್ತಾ ಜಲ್ಸಗಾಹ್‌ದಲ್ಲಿ ಶಿಸ್ತು ಭಂಗವಾಗದಂತೆ ನಿಗಾವಹಿಸುತ್ತಾರೆ. ಇದೇ ರೀತಿ ಊಟ ಸರಬರಾಜು ಮಾಡುವಲ್ಲಿ ಸಹ ಶ್ರದ್ಧೆ ವಹಿಸಿರಿ. ಯಾರಾದರೂ ಸಮಯ ಮೀರಿದಾಗ ಆಗಮಿಸಿದರೆ, ಯಾರಾದರೂ ರೋಗಿಯಾಗಿದ್ದರೆ, ಮಗು ಅಳುತ್ತಿದ್ದರೆ ಆಗ ಏನಾದರೂ ಆವಶ್ಯಕತೆ ಇದ್ದರೆ ಸಾಧ್ಯವಿರುವಷ್ಟು ಅವರಿಗೆ ಸಹಾಯ ಮಾಡಿರಿ. ಸಹಾಯ ನೀಡಲು ಸಾಧ್ಯವಾಗದಿದ್ದರೆ ಉತ್ತಮವಾಗಿ ಸಂತೋಷದಿಂದ ಅವರಿಗೆ ಮನವರಿಕೆ ಮಾಡಿಕೊಡಿರಿ. ಅದೇ ರೀತಿ ಸ್ನಾನ ಗೃಹಗಳಲ್ಲಿ ಸ್ವಚ್ಛತೆ ಕಾಪಾಡುವ ಬಗ್ಗೆ ಸಹ ಗಮನ ಹರಿಸಬೇಕು.

ಜಲ್ಸಕ್ಕೆ ಆಗಮಿಸುವ ಅತಿಥಿಗಳು ಯಾವಾಗಲೂ ನೆನಪಿನಲ್ಲಿರಿಸಬೇಕು, ಅವರು ಈ ಜಲ್ಸದಲ್ಲಿ ಭಾಗವಹಿಸಿರುವುದು ತಮ್ಮ ಹೃದಯಗಳಲ್ಲಿ ತಖ್ವ ಹುಟ್ಟಿಸಲು ಮತ್ತು ತಮ್ಮ ಜ್ಞಾನ, ಕರ್ಮ, ಮತ್ತು ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮಪಡಿಸಲು ಎಂದು. ಈ ಉದ್ದೇಶಲಕ್ಷ್ಯ ನಿಮ್ಮ ಮುಂದೆ ಇದ್ದರೆ ಯಾವುದೇ ರೀತಿಯ ಕೋಪ, ದೂರು, ಕಾರ್ಯಕರ್ತರ ಬಗ್ಗೆ ತಲೆದೋರಲಾರದು. ಜರ್ಮನ್ ನಿವಾಸಿಗಳಾದ ಅತಿಥಿಗಳೊಂದಿಗೆ ನಾನು ಹೇಳಲು ಬಯಸುತ್ತೇನೆ, ಅವರು ಒಂದು ರೀತಿಯಲ್ಲಿ ಅತಿಥಿಗಳಾದರೂ ಅವರು ಆತಿಥೇಯರೂ ಸಹ ಆಗಿದ್ದಾರೆ. ವಿದೇಶಗಳಿಂದ ಆಗಮಿಸುವವರಿಗೋಸ್ಕರ ಅವರು ತ್ಯಾಗ ಮಾಡಬೇಕು. ಅವರಿಗೆ ಕುಳಿತುಕೊಳ್ಳಲು ಸ್ಥಳ ನೀಡಬೇಕು. ಊಟ ಮಾಡುವ ಸ್ಥಳದಲ್ಲಿ ಸ್ಥಳದ ಕೊರತೆ ಇದ್ದರೆ ಅವರು ಅತಿಥಿಗಳಿಗೆ ಸ್ಥಳ ನೀಡಬೇಕು. ಬೇರೆ ಏನಾದರೂ ಸಹಾಯದ ಆವಶ್ಯಕತೆ ಇದ್ದರೆ ಸಹಾಯ ನೀಡುವುದು ನಿಮ್ಮ ಕಡ್ಡಾಯ ಕರ್ತವ್ಯವಾಗಿದೆ. ಅಹ್ಮದಿಯೇತರ ಅತಿಥಿಗಳೊಂದಿಗೆ ಪ್ರತಿಯೊಬ್ಬ ಅಹ್ಮದಿ ತನ್ನ ಉತ್ತಮ ನಡೆವಳಿಕೆ ತೋರಿಸಬೇಕು. ನಿಮ್ಮೆಲ್ಲರ ಉತ್ತಮ ನಡೆವಳಿಕೆ ನೋಡುವಾಗ ಮಾತ್ರ ಮುಸ್ಲಿಮೇತರರಿಗೆ ಇಸ್ಲಾಮೀ ಸಮಾಜದ ಸುಂದರ ದೃಶ್ಯ ಕಾಣಿಸುವುದು. ಅಲ್ಲಿ ಪ್ರತಿಯೊಬ್ಬ ಅಹ್ಮದಿ ವಿನಯ, ಮೃದುತ್ವ, ಪರಸ್ಪರ ಪ್ರೀತಿ ಮತ್ತು ಭ್ರಾತೃತ್ವದ ಉದಾಹರಣೆಗಳನ್ನು ಪ್ರಕಟಿಸಿದರೆ ಅದು ಜನರಿಗೆ ಕಾಣಿಸುವುದು. ಇದೇ ರೀತಿ ವ್ಯಾಪಾರ ಮಳಿಗೆಗಳಿಗೆ ಸಹ ಸರಿಯಾದ ಸಮಯದಲ್ಲಿ ಮಾತ್ರ ಹೋಗಿರಿ. ಕೆಲವರು ಬೇಗ ಹಸಿವು ಪ್ರಕಟಿಸಿ ಹೊರಗೆ ಹೋಗಲು ಬಯಸುತ್ತಾರೆ. ಅಂತಹ ಜನರಿಗೆ ಸಹ ಉಚಿತ ವ್ಯವಸ್ಥೆ ಮಾಡಬೇಕು. ಇದೇ ರೀತಿ ಮಹಿಳೆಯರ ವ್ಯಾಪಾರ ಮಳಿಗೆಗಳಿವೆ. ಪುರುಷರ ವ್ಯಾಪಾರ ಮಳಿಗೆಗಳು ಸಹ ಇವೆ. ಜಲ್ಸದ ಪಾವಿತ್ರ್ಯವನ್ನು ಗಮನದಲ್ಲಿರಿಸಿ, ಪರಿಸರವನ್ನೂ ಗಮನದಲ್ಲಿರಿಸಿ ವರ್ತಿಸಿರಿ.

**ಖೂಲೂ ಲಿನ್ನಾಸಿ ಹುಸ್ನ** – ಜನರೊಂದಿಗೆ ಮೃದುವಾಗಿ ಮಾತನಾಡಿರಿ. ಇದು ಪವಿತ್ರ ಖುರ್‌ಆನಿನ ಆಜ್ಞೆ ಆಗಿದೆ. ಇದು ಕೇವಲ ಕಾರ್ಯಕರ್ತರಿಗೆ ಮಾತ್ರ ಅನ್ವಯಿಸುವ ಆಜ್ಞೆ ಅಲ್ಲ. ಪ್ರತಿಯೊಬ್ಬ ಮುಸ್ಲಿಮ್ ಮತ್ತು ವಿಶಿಷ್ಟವಾಗಿ ಪ್ರತಿಯೊಬ್ಬ ಅಹ್ಮದಿ ಇದರ ಬಗ್ಗೆ ಗಮನ ಹರಿಸಬೇಕು. ಆದುದರಿಂದ ಪವಿತ್ರ ಖುರ್‌ಆನಿನ ಮಾರ್ಗದರ್ಶನ ಪ್ರಕಾರ ಉತ್ತಮ ಸ್ವಭಾವ ಗುಣಗಳಿಂದ ವರ್ತಿಸಿರಿ. ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬನಿಗೆ ಪವಿತ್ರ ಖುರ್‌ಆನಿನ ಈ ಆಜ್ಞೆ ಅನ್ವಯವಾಗುತ್ತದೆ. ಜಲ್ಸದ ಕಾರ್ಯಕ್ರಮ ಜಾರಿಯಲ್ಲಿರುವಾಗ ಯಾವುದಾದರೂ ಅನಿವಾರ್ಯ ಸಂದರ್ಭದಲ್ಲಿ ಎದ್ದು ಹೋಗಬೇಕಾಗಿದ್ದಲ್ಲಿ ಹೊರತು ಜಲ್ಸದ ಕಾರ್ಯಕ್ರಮಗಳನ್ನು ಆಲಿಸಿರಿ. ಪ್ರತಿಯೊಂದು ಭಾಷಣದಲ್ಲಿ ಪ್ರತಿಯೊಬ್ಬ ಅಹ್ಮದಿಗೆ ಯಾವುದಾದರೊಂದು ವಿಷಯದ ಪ್ರಸ್ತಾಪ ಅವನ ಜೀವನವನ್ನು ಉತ್ತಮಗೊಳಿಸಲು ಸಹಕಾರಿಯಾಗಿರಬಹುದು. ಅದೇ ರೀತಿ ಜಲ್ಸದಲ್ಲಿ ಕುಳಿತಿರುವಾಗಲೂ ಹೊರಗೆ ನಡೆಯುತ್ತಾ ಇರುವಾಗಲೂ ಈ ದಿನಗಳಲ್ಲಿ ಝಿಕ್ರೆ ಇಲಾಹಿ, ದುರೂದ್ ಮತ್ತು ಇಸ್ತಿಗ್‌ಫಾರ್ ದುಆಗಳನ್ನು ಮಾಡುತ್ತಾ ಇರಬೇಕು. ಇವುಗಳು ವೈಯಕ್ತಿಕ ಸ್ಥಿತಿಯ ಸುಧಾರಣೆಗೆ, ಜಮಾಅತಿನ ಸ್ಥಿತಿಯ ಪ್ರಗತಿಗೆ, ಮತ್ತು ಮುಸ್ಲಿಮ್ ಸಮುದಾಯವು ಯಾವ ದುರವಸ್ಥೆಯಲ್ಲಿದೆಯೋ ಅದು ಉತ್ತಮ ಸ್ಥಿತಿಗೆ ತಲಪಲು ಸಹಾಯಕವಾಗುವುದು. ಅಹ್ಮದಿಯರ ಮೇಲೆ ಬಹಳ ದೊಡ್ಡದಾದ ಹೊಣೆಗಾರಿಕೆ ಇದೆ. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದುರೂದ್ ಪ್ರಾರ್ಥನೆ ಮತ್ತು ಸಲಾಮ್ ಅರ್ಪಿಸುತ್ತಾ ಇರಬೇಕು. ಇಸ್ಲಾಮಿನ ಅಭಿವೃದ್ಧಿಗೋಸ್ಕರ ಪ್ರಾರ್ಥಿಸಬೇಕು. ನೀವು ಈ ದೇಶಕ್ಕೆ ಆಗಮಿಸಿ ನಿಮ್ಮ ಲೌಕಿಕ ಆಶಾಭಿಲಾಷೆಗಳನ್ನು ಮಾತ್ರ ಈಡೇರಿಸುವವರಾಗಬೇಡಿರಿ. ನೀವು ನಿಮ್ಮಲ್ಲಿ ಒಂದು ಪರಿಶುದ್ಧ ಬದಲಾವಣೆ ಉಂಟು ಮಾಡಲು ಪ್ರಯತ್ನಿಸಿರಿ. ನೀವು ದುರೂದ್ ಮತ್ತು ಝಿಕ್ರೆ ಇಲಾಹಿಯಿಂದ ನಿಮ್ಮ ನಾಲಗೆಗಳನ್ನು ತೇವಭರಿತವಾಗಿ ಮಾಡಿರಿ. ನೀವು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ಅಲ್ಲಾಹನು ಈ ಜಲ್ಸದ ಉದ್ದೇಶಲಕ್ಷ್ಯವನ್ನು ಈಡೇರಿಸಿಕೊಡುವವನಾಗಲಿ. ಅವನು ಅದರ ಅನುಗ್ರಹಗಳಲ್ಲಿ ನಮ್ಮನ್ನು ಪಾಲುಗಾರರನ್ನಾಗಿ ಮಾಡಲಿ. ಮಹಿಳೆಯರು ತಮ್ಮ ಮಕ್ಕಳಿಗೋಸ್ಕರ ಮತ್ತು ತಮ್ಮ ಪತಿಯಂದಿರಿಗೋಸ್ಕರ ಪ್ರಾರ್ಥಿಸಬೇಕು. ಅಲ್ಲಾಹನು ಅವರನ್ನು ಧರ್ಮದಲ್ಲಿ ಸ್ಥಿರಚಿತ್ತರಾಗಿರಿಸುವವನಾಗಲಿ. ಧರ್ಮ ಲೋಪದಿಂದ ಸಂಭವಿಸುವಂತಹ ಪ್ರತಿಯೊಂದು ಅಪಾಯದಿಂದ ಅಲ್ಲಾಹನು ಅವರನ್ನು ರಕ್ಷಿಸಲಿ. ಅವರು ಯಾವಾಗಲೂ ನೇರಮಾರ್ಗದಲ್ಲಿ ಚಲಿಸುವವರಾಗಲಿ. ಈ ದಿನಗಳಲ್ಲಿ ಮತ್ತು ಆಮೇಲೆ ಸಹ ಬಾಜಮಾಅತ್ ನಮಾಝ್ ಬಗ್ಗೆ ಬದ್ಧತೆ ಇರಬೇಕು. ಇಲ್ಲಿ ವಾಸಿಸುವವರು ವಿಶಿಷ್ಟವಾಗಿ ಫಜರ್ ನಮಾಝ್‌ನಲ್ಲಿ ಆವಶ್ಯಕವಾಗಿ ಭಾಗವಹಿಸಬೇಕು. ಪ್ರತಿಯೊಬ್ಬ ಅಲ್ಲಾಹನ ಇಚ್ಛೆ ಪ್ರಕಾರ ಜೀವಿಸುವ ಭಾಗ್ಯ ಗಳಿಸುವವನಾಗಲಿ. ಪ್ರತಿಯೊಬ್ಬ ಅಹ್ಮದಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್‌ನಲ್ಲಿ ಸೇರಿರುವುದರ

ಮಹತ್ವವನ್ನು ಅರಿತುಕೊಂಡು ತನ್ನ ಹೊಣೆಗಾರಿಕೆಗಳನ್ನು ನಿರ್ವಹಿಸುವವನಾಗಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮ್ಮ ಜಮಾಅತ್ ತಖ್ವವನ್ನು ಮೈಗೂಡಿಸುವ ತನಕ ಮೋಕ್ಷಗಳಿಸಲಾರದು ಹಾಗೂ ಅಲ್ಲಾಹನು ನಮ್ಮನ್ನು ತನ್ನ ಸಂರಕ್ಷಣೆಯಲ್ಲಿರಿಸಲಾರನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನೀವು ನಿಮ್ಮ ಮನೆಗಳನ್ನು ಝಿಕ್ರೆ ಇಲಾಹಿಯಿಂದ ತುಂಬಿಸಿರಿ. ದಾನಧರ್ಮ ನೀಡಿರಿ. ನೀವು ಅಲ್ಲಾಹನ ಕಾರುಣ್ಯಕ್ಕೆ ಪಾತ್ರರಾಗಲು ಪಾಪ ಕೃತ್ಯಗಳಿಂದ ರಕ್ಷಿಸಿಕೊಳ್ಳಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಚ್ಛೆ ಪ್ರಕಾರ ನಾವು ಜೀವಿಸುವಂತೆ ಅಲ್ಲಾಹನು ಮಾಡಲಿ. ನಾವು ಜಲ್ಸದಿಂದ ಅನುಗ್ರಹ ಗಳಿಸುವವರಾಗಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸದಲ್ಲಿ ಭಾಗವಹಿಸುವವರಿಗೋಸ್ಕರ ಮಾಡಿದ ಪ್ರಾರ್ಥನೆಗಳ ಪಾಲು ನಾವು ಪಡೆಯುವವರಾಗಲಿ. ನಾವು ಈ ದಿನಗಳಲ್ಲಿಯೂ ಅನಂತರ ಸಹ ನಾವು ಅವುಗಳ ವಾರೀಸುದಾರರಾಗೋಣ. ನಾವು ಯಾವಾಗಲೂ ಒಳಿತುಗಳನ್ನು ಮಾಡುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At. Karlsruhe, Germany . On 07-09-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon